

# ಜಾಣರ ಪೆಟ್ಟಿಗೆ

**ವಾರದ ಪತ್ರ**

## ಸಣ್ಣ ಕಥೆಗಳಿಗೆ ಸುಗ್ಗಿಯ ಹುಗ್ಗಿ

ಕನ್ನಡ ಸಾಹಿತ್ಯಕ್ಕೆ ಸಣ್ಣಕತೆಗಳ ಕೊಡುಗೆ ಅಪಾರ. ಶತಮಾನದ ಸಣ್ಣಕತೆಗಳು, ಹೊಸ ತಲೆಮಾರಿನ ಕತೆಗಳು, ಹೀಗೆ ಹಲವು ಪ್ರಸಿದ್ಧ ಸಣ್ಣಕತೆಗಳನ್ನು ಚಿತ್ರೀಕರಿಸಿ ಕನ್ನಡ ಚೆಂದನ ವಾಹಿನಿಯು ವೀಕ್ಷಕರಿಗೆ ಪ್ರಸಾರ ಮಾಡುತ್ತಿದೆ. ಕನ್ನಡ ಪ್ರಥಮ ಸಣ್ಣಕತೆ ಎಂದೇ ಪರಿಗಣಿಸುವ 'ಕಮಲಾಪೂರದ ಹೊಟ್ಲಿನಲ್ಲಿ' ಕನ್ನಡದ ಆಸ್ತಿ, ಸಣ್ಣಕತೆಗಳ ಜನಕ ಎಂದೇ ಪ್ರಸಿದ್ಧರಾದ ಮಾಸ್ತಿಯವರ 'ಮೊಸರಿನ ಮಂಗಮ್ಮ', ನಿರಂಜರ 'ಕೊನೆಯ ಗಿರಾಕಿ', ವೀಣಾರವರ 'ಕೊನೆಯ ದಾರಿ', ಪಿ. ಲಂಕೇಶರ 'ರೊಟ್ಟಿ', ಕುವೆಂಪು ಅವರ 'ಧನ್ವಂತರಿ ಚಿಕಿತ್ಸೆ'– ಹೀಗೆ ತುಂಬಾ ಔಚಿತ್ಯ ಪೂರ್ಣಕತೆಗಳ ಪ್ರಸಾರ ಮಾಡಿತು.

ಪ್ರತಿ ಕಥೆಗಳು ಜೀವನದ ಪ್ರತಿಬಿಂಬಗಳೆ. ಬಳಸಿರುವ ನೆಲದ ಭಾಷೆಯ ಸೊಗಡು, ಚಿತ್ರೀಕರಿದ ಸ್ಥಾನಗಳ ನಿಸರ್ಗ ರಮಣೀಯತೆ, ಕತೆಯ ಒಟ್ಟು ಪರಿಣಾಮವನ್ನು ಹೆಚ್ಚಿಸುವಲ್ಲಿ ತುಂಬಾ ಸಹಕಾರಿ. ಹೊಸ ಕಥೆಗಾರರಿಗೆ, ಕತೆಗಳನ್ನು ಬರೆಯು ವಿಧಾನಗಳನ್ನು, ಕಥಾ ಹಂದರದ ತಂತ್ರಗಾರಿಕೆಯನ್ನು ಸೂಕ್ಷ್ಮವಾಗಿ ಪರಿಚಯಿಸುವಲ್ಲಿ ಯಶಸ್ವಿಯಾಗುತ್ತವೆ. ಓದುವ ಹಂಬಲವನ್ನು ಹೆಚ್ಚಿಸುವ, ಪುಸ್ತಕ ಪ್ರೀತಿಯನ್ನು ಕುದುರಿಸುವ ಇಂಥ ಕಾರ್ಯಕ್ರಮಗಳು ಇನ್ನಷ್ಟು ಮೂಡಿ ಬರಲಿ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ರಮಣೀಯ ತಾಣ ಪರಿಚಯ

ಪ್ರೇಮಿಗಳ ದಿನದಂದು ಪ್ರಸಾರವಾದ ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಕಾರ್ಯಕ್ರಮ ವಿಶೇಷವಾಗಿತ್ತು. ಚಂದ್ರು ಆ ದಿನ ನಿರಂಜನ್ ದೇಶಪಾಂಡೆ ದಂಪತಿಯ ಜೊತೆ ನಿಸರ್ಗದ ಮಡಿಲಲ್ಲಿ ಕಾರ್ಯಕ್ರಮ ನಡೆಸಿ ಕೊಟ್ಟದ್ದು ಖುಷಿ ಕೊಟ್ಟಿತು. ಬೆಟ್ಟ–ಗುಡ್ಡ, ಕಾಡು–ಮೇಡು ಕಂಡು ನಗರದ ಗದ್ದಲದಿಂದ ಬೇಸತ್ತು ಒಂದೆರಡು ದಿನ ಪ್ರಶಾಂತ ಪರಿಸರದಲ್ಲಿ ಕಾಲ ಕಳೆಯಲು ಬಯಸುವವರಿಗೆ ರಮಣೀಯ ತಾಣವನ್ನು ಪರಿಚಯ ಮಾಡಿಕೊಟ್ಟರು.

—ಕೆ.ಎಸ್. ಸವಿತ, ಬೆಂಗಳೂರು

## ಸಂತೆ ಹೊತ್ತಿನ ಸಾಹಿತ್ಯ

ಝೀ ಕನ್ನಡದ 'ಸತ್ಯ'ದ ಇತ್ತೀಚಿನ ಸಂಚಿಕೆಯಲ್ಲಿ ಎರಡು ಸಂಭಾಷಣೆಗಳು ಗಮನ ಸೆಳೆದವು. ಮನೆ ಅಳಿಯ ಸುಹಾಸ ತನ್ನ ಹೆಂಡತಿಗೆ ತಾನೇ ನಕಲಿ ಸಹಿಮಾಡಿದ ಚೆಕ್ಕನ್ನು ನೀಡುತ್ತಾ 'ಡಾರ್ಲಿಂಗ್ ಈ ಸಹಿ ನಕಲಿ ಅಂತ ನಿಂಗೇ ಆಗ್ಲಿ, ಬ್ಯಾಂಕಿನವರಿಗೇ ಆಗ್ಲಿ ಗೊತ್ತಾಗಲ್ಲ. ಅಷ್ಟೇ ಅಲ್ಲ ಸಹಿ ಮಾಡಿದವನಿಗೂ ಕಂಡುಹಿಡಿಯಕ್ಕೆ ಆಗಲ್ಲ' ಎಂದು ಕೊಚ್ಚಿಕೊಳ್ಳುತ್ತಾನೆ. ಅವನೇ ಮಾಡಿದ ನಕಲಿ ಸಹಿ ಅವನಿಗೂ ಗೊತ್ತಾಗಲ್ಲ ಅನ್ನುವ ವಿಷಯ ಅಚ್ಚರಿ ಮೂಡಿಸುತ್ತದೆ.

ನಂತರ ಸತ್ಯ, ಚಿದಾಗ್ನಿ ಬಾಯಿ ಬಗ್ಗೆ ಹೇಳುತ್ತಾ 'ಇಂತಹವರು ಜನಪ್ರತಿನಿಧಿಗಳಾಗಿ ಹೋದರೆ ತೋಳ ಕಾಯಲು ನರಿ ನೇಮಿಸಿದ ಹಾಗಾಗುತ್ತೆ' ಅನ್ನುತ್ತಾಳೆ. ನಾವೆಲ್ಲ ಚಿಕ್ಕವರಿದ್ದಾಗ 'ಕುರಿ ಕಾಯಲು ತೋಳ ಬಿಟ್ಟಂತೆ' ಎಂದು ಗಾದೆ ಕೇಳಿದ ನೆನಪು. ಸಂತೆ ಹೊತ್ತಿಗೆ ಮೂರು ಮೊಳ ನೇಯಲು ಹೋದರೆ ಹೀಗೇ ಆಗುವುದು. 'ಸಾವಿರ ಸಾವಿರ ಎಪಿಸೋಡುಗಳಿಗೆ ಸಂಭಾಷಣೆ ಬರೆಯುವವರ ಕಷ್ಟ ನಿಮಗೇನ್ರೀ ಗೊತ್ತು?' ಅಂದರೆ ಏನೂ ಮಾಡಲಾಗುವುದಿಲ್ಲ. ಪಾಲಿಗೆ ಬಂದದ್ದೇ ಪಂಚಾಮೃತ. ನೋಡೋರು ಮಾತ್ರ ಕುರಿಗಳು.

—ವಾ. ಮುರಳೀಧರ, ತೀರ್ಥಹಳ್ಳಿ

## ವಿಶೇಷಗಳ ಸಿರಿ ಕನ್ನಡ

ಕನ್ನಡದ ಪ್ರಮುಖ ವಾಹಿನಿಗಳ ಟಿ.ಆರ್.ಪಿ. ರೇಟ್ ಹೆಚ್ಚುತ್ತಾ ಹೋದಂತೆ ಸಹಜವಾದ ಆಂತರಿಕ ಪೈಪೋಟಿಯೂ ದೃಶ್ಯ ಮಾಧ್ಯಮ ಕ್ಷೇತ್ರದಲ್ಲಿ ಸರ್ವೇ ಸಾಮಾನ್ಯ. ಇಂತಹ ಸ್ಪರ್ಧಾತ್ಮಕ ಯುಗದಲ್ಲಿ ಪ್ರಚಲಿತ 'ಸಿರಿ ಕನ್ನಡ ವಾಹಿನಿ' ವಿಭಿನ್ನ ಎಂದೇ ಹೇಳಬೇಕು. ಹೆಸರಿಗೆ ತಕ್ಕಂತೆ ಅಪ್ಪಟ ಕನ್ನಡ ಕಾರ್ಯಕ್ರಮಗಳನ್ನು ಯಾವುದೇ ರೀತಿಯ ಅಬ್ಬರ ಆಡಂಬರ ಇಲ್ಲದೆ ಸರಳ ರೀತಿಯಲ್ಲಿ ಮನರಂಜಿಸುತ್ತದೆ.

ಪ್ರತೀ ದಿನ 'ಹಾಸ್ಯ ದರ್ಬಾರ್'ನಲ್ಲಿ ಕನ್ನಡದ ಹೆಸರಾಂತ ಮಾತಿನ ಮಲ್ಲರನ್ನು ಒಂದೇ ವೇದಿಕೆಗೆ ಆಯೋಜಿಸಿ ನಿತ್ಯನೂತನ ಎಂಬಂತೆ ಪ್ರಸಾರ ಮಾಡುವ ತಂಡಕ್ಕೆ ಜೈ ಅನ್ನಲೇಬೇಕು. 'ಒಂದು ಸಿನಿಮಾ ಕಥೆ' ಕಾರ್ಯಕ್ರಮದಲ್ಲಿ ಅತ್ಯುತ್ತಮ ಕನ್ನಡ ಸಿನಿಮಾವನ್ನ ಪರಿಚಯಿಸಿ ನಂತರ ಚಿತ್ರ ಪ್ರದರ್ಶನ ಮಾಡುವ ರೀತಿ ನಿಜಕ್ಕೂ ಶ್ಲಾಘನೀಯ. ಇತ್ತೀಚೆಗೆ ರಾಜ್‌ಕುಮಾರ್ ಅಭಿನಯದ 'ಸಾಕ್ಷಾತ್ಕಾರ' ಇದಕ್ಕೆ ಒಂದು ಉತ್ತಮ ಉದಾಹರಣೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಸೀರಿಯಲ್‌ಗಳ ಅಪ್ರಬುದ್ಧತೆ

ಕಲರ್ಸ್ ಕನ್ನಡದ 'ಲಕ್ಷಣ ಆರಂಭದಲ್ಲಿ ಉತ್ತಮವಾಗಿ ಮೂಡಿದರೂ, ಈಗ ಅಪ್ರಬುದ್ಧತೆ ಕಾಣಿಸುತ್ತಿದೆ. ಖಳನಾಯಕಿ ಪಾತ್ರದ ಶ್ವೇತಾ, ವಿದೇಶದಿಂದ ಬಂದಿರುವ ವೈದ್ಯರಿಗೆ ಫೋನ್ ಮಾಡಿ, ತಾನು ನಕ್ಷತ್ರ ಎಂದು ಹೇಳುವಾಗ, ಹಲವು ವರ್ಷ ವಿದೇಶದಲ್ಲಿರುವ ಆ ವೈದ್ಯನಿಗೆ ಟ್ರೂ ಕಾಲರ್‌ನಲ್ಲಿ ಯಾರು ಮಾತನಾಡುತ್ತಿರುವುದು ಎಂಬುದು ತಿಳಿಯುವುದಿಲ್ಲವೇ?

ಇಂತಹ ಅಪ್ರಬುದ್ಧ ನಡೆಗಳಿಂದಲೇ ಸೀರಿಯಲ್‌ಗಳು ಹಾದಿ ತಪ್ಪಿ ನಗೆಪಾಟಲಿಗೆ ಈಡಾಗಬಲ್ಲದು. ಮತ್ತೊಂದು ಉದಾಹರಣೆ, ಮಂಗಳ ಗೌರಿ ಮದುವೆ. ಆಹಾ, ಗರ್ಭಿಣಿ ಹೆಣ್ಣಿಗೆ ಭೀಕರ ಅಪಘಾತವಾಗುತ್ತದೆ. ಗರ್ಭಕ್ಕೆ ಪೆಟ್ಟಾಗುವುದಿಲ್ಲ! ಗರ್ಭಿಣಿ ಕರಾಟೆ, ದೊಣ್ಣೆ ವರಸಿ ಫೈಟ್‌ಗಳನ್ನು ಮಾಡುತ್ತಾಳೆ, ದೊಡ್ಡ ಗೋಡೆಯಿಂದ ಹಾರಿ ನೆಗೆಯುತ್ತಾಳೆ, ಇಷ್ಟೆಲ್ಲಾ ಮಾಡಿಯೂ ಆಕೆಗೆ ತನ್ನ ಗಂಡ ಎದುರಿಗೇ ಬಂದರೂ ನಾನೇ ನಿಮ್ಮ ಹೆಂಡತಿ ಎಂದು ಹೇಳುವುದಿಲ್ಲ. ನಿರ್ದೇಶಕರು ಸುಖಾಸುಮ್ಮನೆ ಎಳೆಯುತ್ತಾ ಹೋಗುತ್ತಿದ್ದಾರೆ. ಇಂಥಹ ಸೀರಿಯಲ್‌ಗಳೇ ಅಪ್ರಬುದ್ಧತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

—ವಿಜಯ್ ಹೆಮ್ಮಿಗೆ, ಮೈಸೂರು

## ಅವಾಸ್ತವ ಕಥೆ

ಕಲರ್ಸ್ ಕನ್ನಡದ 'ದೊರೆಸಾನಿ' ಹೆಸರು ಚೆನ್ನಾಗಿದೆ. ಕಥೆಯಲ್ಲಿನ ಪಾತ್ರಗಳ ಪೋಷಣೆ ಜಾಳು ಜಾಳು. 'ರಾಮಾಚಾರಿ' ಬಹುಪಾಲು ಪಾತ್ರಧಾರಿಗಳು, ನಟನೆಯಲ್ಲಿ ಹಿರಿಯರು. ಆದರೂ ಮೊದಲಿಗೇ ಎಡವಿದ್ದಾರೆ. ಇಬ್ಬರ ಹೆಂಡಿರ ಮುದ್ದು ಗಂಡನ ಪಾತ್ರ ಅನವಶ್ಯಕ. ಎರಡನೆಯದು ಮುಖ್ಯ ಪಾತ್ರಧಾರಿಗಳ ಕಥೆಯ ಬೆಳವಣಿಗೆ ಪ್ರಬುದ್ಧವಾಗಿಲ್ಲ. ನಾಯಕನಿಗೆ ಅವಮಾನ ಮಾಡಬೇಕೆಂದು ಕಚೇರಿಯಲ್ಲಿ ನಡೆದ ಎರಡು ಪ್ರಸಂಗಗಳು ಯಾವ ಕಚೇರಿಯಲ್ಲೂ ನಡೆಯಲು ಸಾಧ್ಯ ಇಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಇನ್ನೂ ಎಷ್ಟು ಪಾತ್ರ ಬರಬಹುದು

ಕಲರ್ಸ್ ಕನ್ನಡದ 'ಮಂಗಳ ಗೌರಿ ಮದುವೆ'ಯ ಕಥೆ ವ್ಯಥೆ ಏನು? ಅದು ಯಾವಾಗ ಮುಗಿಯುತ್ತೆ? ದಿನವೂ ಹೊಸ ಟ್ವಿಸ್ಟ್ ಪಡೆಯುತ್ತದೆ. ಹೊಸ ಪಾತ್ರಗಳ ಸೃಷ್ಟಿ ಆಗುತ್ತವೆ. ಇವರಿಗೆ ಬೇರೆ ಕಥೆ ಅಥವಾ ಪಾತ್ರಧಾರಿಗಳು ಸಿಗುವುದಿಲ್ಲವೇ?

ಅತಿಯಾದರೆ ಅಮೃತವೂ ವಿಷವಲ್ಲವೇ? ಮಂಗಳಾ ಅಥವಾ ರಾಜೀವ್ ಇನ್ನೂ ಎಷ್ಟು ಸಲ ನೆನಪು ಕಳೆದುಕೊಳ್ಳಬಹುದು. ಇವರು ಚಿರಂಜೀವಿಗಳಾ? ಮಂಗಳಾಳ ಎಷ್ಟನೆಯ ಮಗು ಸ್ವರ್ಣ ಗೌರಿ? ಇನ್ಯಾವುದೋ ಗೌರಿಯಾಗಿ ಕಥೆಯನ್ನು ಮುಂದುವರಿಸಬಹುದು. ಸ್ನೇಹ ಮತ್ತು ತನಿಷಾ ಇನ್ನೂ ಎಷ್ಟು ಸಂಸಾರಗಳನ್ನು ಹಾಳು ಮಾಡಬಹುದು? ಇನ್ನೂ ಎಷ್ಟು ನಾಯಕ/ನಾಯಕಿಯರ ಪಾತ್ರಗಳು ಸೇರ್ಪಡೆಯಾಗಬಹುದು... ಯಾರಾದರೂ ಹೇಳಬಹುದಾ? ಇದು ನನ್ನ ಒಬ್ಬಳ ಅಭಿಪ್ರಾಯವಲ್ಲ. ನನ್ನ ಬಂಧು ಬಳಗದವರು ಈ ಧಾರಾವಾಹಿಯನ್ನು ನೋಡುವುದು ಬಿಟ್ಟು ಬಹಳ ಕಾಲವಾಯಿತು.

—ಗಾಯತ್ರಿ ಮೂರ್ತಿ